ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು
ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ನಮ್ಮ ಹೆಮ್ಮೆಯ ರೈತ

ಕ್ರ.ಸಂ. 01

ಹೆಸರು : **ಎನ್. ಉದಯ ಕುಮಾರ**



ವಿಳಾಸ : ಗ್ರಾಮ ಸಿರವಾರ ತಾ॥ ಹೋ॥ ಸಿರವಾರ ಜಿ॥ ರಾಯಚೂರು

ಮೊಬೈಲ್ ಸಂಖ್ಯೆ : 94485 70677

ಒಟ್ಟು ಭೂಮಿ : 7.12 ಎಕರೆ

ಶೈಕ್ಷಣಿಕ ವಿದ್ಯಾರ್ಹತೆ : B. Pharmacy

ವಿಶೇಷತೆ : ಮಾವು, ನೆರಳೆ ಹಣ್ಣು, ನುಗ್ಗೆ, ಕರಿಬೇವು, ಲಿಂಬು, ಪಪ್ಪಾಯ, ಸೀತಾಫಲ, ತೆಂಗು, ಮೆಕ್ಕೆಜೋಳ, 4 ಆಕಳು, 2 ಎಮ್ಮೆ, 30 ಟಗರು, 3 ನಾಯಿಗಳು ಮುಂತಾದವುಗಳು

ವಿಶೇಷತೆಗಳು :

1) ಇವರು ತಮ್ಮ 7.12 ಜಮೀನಲ್ಲಿ ಸಮಗ್ರ ಕೃಷಿ ಪದ್ಧತಿ ಅಳವಡಿಕೆ ಮಾಡಿದ್ದಾರೆ.
2) ಇವರು ತಮ್ಮ ಜಮೀನಿನಲ್ಲಿ 20 ಗುಂಟೆ ಕೃಷಿ ಹೊಂಡ ನಿರ್ಮಿಸಿದ್ದಾರೆ
3) 7.12 ಎಕರೆ ತೋಟಕ್ಕೆ ಹನಿ ನೀರವಾರಿ ಅಳವಡಿಕೆ ಮಾಡಿದ್ದಾರೆ.
4) ಪೆನ್ಸಿಂಗ್ ಬಳಸಿಕೊಂಡು ತಮ್ಮ ಜಮೀನು ರಕ್ಷಣೆ ಮಾಡಿಕೊಂಡಿದ್ದಾರೆ.
5) 5–20 ಬಾಕ್ಸ್ ಜೇನು ಪೆಟ್ಟಿಗೆ ಇಟ್ಟುಕೊಂಡು ಜೇನು ಕೃಷಿ ಮಾಡುತ್ತಿದ್ದಾರೆ.
6) ಜಮೀನಿನಲ್ಲಿ ಇರುವ ಕಳೆಗಳು ಕಸಕಡ್ಡಿ ಬಳಸಿ ಎರೆಹುಳು ಗೊಬ್ಬರ ತಯಾರಿಸಿ ಜಮೀನಿಗೆ ಬಳಸುತ್ತಾರೆ.
7) ಇವರ ಜಮೀನಲ್ಲಿ 4 ರಿಂದ 5 ಜನ ದಿನ ನಿತ್ಯ ಕೆಲಸ ನಿರ್ವಹಿಸುತ್ತಾರೆ
8) ಇವರು ಉದಯವನ ಹೆಸರಿನಲ್ಲಿ ಪ್ರೇಕ್ಷಣಾ ಸ್ಥಳಮಾಡಿ, ತೋಟದಲ್ಲಿ ಸುಮ್ಮಿಂಗ್, ಟೆಬಲ್ ಟೆನಿಸ್, ಕ್ರಿಕೆಟ್ ನೆಟ್ ಅಭ್ಯಾಸ ಹಾಗೂ ಸಿರಿಧಾನ್ಯ ಪದಾರ್ಥಗಳನ್ನು ಬಳಸಿ ತಿಂಡಿ ತಿನುಸು ಮಾಡುತ್ತಾರೆ.

ವಾರ್ಷಿಕ ಆದಾಯ : ರೂ. 9,50,000/–

ಇತರೆ ಚಟುವಟಿಕೆಗಳು : ಕೃಷಿ ಪ್ರವಾಸ, ಕೃಷಿ ಚಿಂತನ ಕೂಟ, ಸಾಮಾಜಿಕ ಸ್ವಾಸ್ಥಕ್ಕಾಗಿ ಸೇವೆ

ಪ್ರಶಸ್ತಿಗಳು :

1. ಕೆ. ಆರ್ ನಾರಯಣ ಪಾಂಡೇಷನ್ ಬೆಂಗಳೂರು ಇವರಿಂದ ಉತ್ತಮ ರೈತ ಪ್ರಶಸ್ತಿ
2. ಕಲಾ ಸಂಕಲನ ಸಂಸ್ಥೆ ವತಿಯಿಂದ ಬಸವ ಪುರಸ್ಕೃತ ಪ್ರಶಸ್ತಿ
3. ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಪ್ರಶಸ್ತಿ









ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು
ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ನಮ್ಮ ಹೆಮ್ಮೆಯ ರೈತ

ಕ್ರ.ಸಂ. 02



ಹೆಸರು : **ಶ್ರೀ. ಬಸವರಾಜ ತಂ. ಶರಣಪ್ಪಗೌಡ**

ವಿಳಾಸ : ಗ್ರಾಮ: ಪಲಕಮದೊಡ್ಡಿ ಪೋ.: ಕಟ್ಲಟ್ಕೂರು ತಾ॥ ಜಿ॥ ರಾಯಚೂರು

ಮೊಬೈಲ್ ಸಂಖ್ಯೆ : **8495818104**

ಒಟ್ಟು ಭೂಮಿ : **80 ಎಕರೆ**

ಶೈಕ್ಷಣಿಕ ವಿದ್ಯಾರ್ಹತೆ : ಬಿಇ (ಕಂಪ್ಯೂಟರ್ ಸೈನ್ಸ್)

ವಿಶೇಷತೆ : **50 ಎಕರೆ ತರಾಕಾರಿ ಬೆಳೆಗಳು (ಟೊಮ್ಯಾಟೋ, ಬದನೆ, ಕ್ಯಾಪ್ಸಿಕಂ, ಹಾಗಲಕಾಯಿ, ಸೌತೆಕಾಯಿ, ಚಪ್ಪರದ ಅವರೆ, ಈರುಳ್ಳಿ ಹೀರೆಕಾಯಿ & ಹಸಿರು ಮೆಣಸಿನಕಾಯಿ)**

ವಿಶೇಷತೆಗಳು : **30 ಎಕರೆಯಲ್ಲಿ ಹತ್ತಿ, ತೊಗರಿ, ಜೋಳ, ಕಡಲೆ, ಸಜ್ಜೆ, ಭತ್ತ, ನಿಂಬೆ, ತೆಂಗು, ಪೇರಲ, ಸಪೋಟ & ಹೆಬ್ಬೆವು 3 ಎಮ್ಮೆ, 2 ಆಕಳು, 05 ಕುರಿ & 10 ಕೋಳಿ ಕೃಷಿ ಮತ್ತು ಉಪಕಸಬು**

ಸೌರಶಕ್ತಿ ಆಧಾರಿತ ಹನಿ ನೀರಾವರಿ ಪದ್ಧತಿಯಿಂದ ಕೋಲು ಅಸರೆಯ ಮುಖಾಂತರ ಚಪ್ಪರದ ಅವರೆ, ಹಾಗಲಕಾಯಿ ಮತ್ತು ಸೌತೆಕಾಯಿ ಬೇಸಾಯ.

ಹನಿ ನೀರಾವರಿಯ ಲ್ಯಾಟರಲ್ ಪೈಪಗಳ ಖರ್ಚಿನ ಉಳಿತಾಯಕ್ಕಾಗಿ ಜೋಡು ಸಾಲು ಪದ್ಧತಿಯಲ್ಲಿ ಬೀಜ ಬಿತ್ತನೆ.

ನೈಸರ್ಗಿಕ ಸಂಪನ್ಮೂಲಗಳ ಸದ್ಬಳಕೆ ಹಾಗೂ ವಿವಿಧ ಕೃಷಿ ಚಟುವಟಿಕೆಗಳ ಸರಳೀಕರಣ.

ದ್ವಿತಿಯ ಮತ್ತು ನಂತರದ ಬೆಳೆಯ ಪರಿಕರಗಳ ವೆಚ್ಚ ಮತ್ತು ನೀರಿನ ಉಳಿತಾಯ ಮಾಡಬಹುದು.

ಪ್ರತಿ ಬೆಳೆಯ ಬಿದ್ದ ಎಲೆಗಳು ಅಲ್ಲಿಯೇ ಕಳಿತು ಗೊಬ್ಬರವಾಗಿ ಗಿಡಗಳಿಗೆ ಲಭಿಸುತ್ತದೆ.

ಭೂಮಿ ಸಿದ್ಧತೆ, ಅತಿಯಾದ ಗೊಬ್ಬರ ಉಣಿಸುವಿಕೆ ಮತ್ತು ಪೀಡೆನಾಶಕಗಳ ಬಳಕೆಯ ವೆಚ್ಚ.

ಪ್ರಯೋಗಗಳು / ಪ್ರಾತ್ಯಕ್ಷಿಕೆಗಳು : ಸುಮಾರು 2 ವರ್ಷಗಳಿಂದ ಈ ಪದ್ಧತಿಯಲ್ಲಿ ಬೆಳೆಗಳನ್ನು ಬೆಳೆಯಲಾಗುತ್ತಿದೆ.

ಸ್ವಚ್ಛತೆ ಕಾಪಾಡುವಿಕೆ ಹಾಗೂ ಪೀಡೆ ನಾಶಕ ಸಿಂಪರಣೆ ಮಾಡುವುದರಿಂದ ರೋಗ ಮತ್ತು ಕೀಟ ಬಾಧೆಯು ಕಡಿಮೆ.

ತರಕಾರಿ ಬೆಳೆಗಳನ್ನು ಸಾವಯವ ಪದ್ಧತಿಯಲ್ಲಿ ಬೆಳೆದು ಸ್ಥಳೀಯ ಮಾರುಕಟ್ಟೆಗೆ ಮಾರಾಟ ಮಾಡುತ್ತಿದ್ದಾರೆ.

ಹಿಂಗಾರಿನಲ್ಲಿ ಜೋಳದ ಬೆಳೆಗೆ ಅಧಿಕ ಉತ್ಪಾದಕತೆಗಾಗಿ ಸುಧಾರಿತ ತಂತ್ರಜ್ಞಾನಗಳನ್ನು ಉಪಯೋಗಿಸಿಕೊಂಡು ಹೆಚ್ಚಿನ ಇಳುವರಿ ಪಡೆಯುತ್ತಿದ್ದಾರೆ.

ವಾರ್ಷಿಕ ಆದಾಯ : ಒಂದು ಕೋಟಿ ರೂಪಾಯಿಗಳು.

ಇತರೆ ಚಟುವಟಿಕೆಗಳು : ಕೃಷಿ ಮತ್ತು ಉಪಕಸಬು ಕೃಷಿ ಪ್ರವಾಸ, ಕೃಷಿ ಚಿಂತನ ಕೂಟ, ಸಾಮಾಜಿಕ ಸ್ವಾಸ್ಥಕ್ಕಾಗಿ ಸೇವೆ

ಪ್ರಶಸ್ತಿಗಳು :
1. ಶ್ರೇಷ್ಠ ಯುವ ಕೃಷಿಕ ಪ್ರಶಸ್ತಿ 2017–18 ಕೃ.ವಿ.ವಿ., ರಾಯಚೂರು
2. ಆವಿಷ್ಕಾರೀ ರೈತ ಪ್ರಶಸ್ತಿ ಕೃಷಿ ಚಂದನಾ, ಬೆಂಗಳೂರು
3. ಸೂಪರ್ ಸ್ಟಾರ್ (ರೈತ ವಿಜಯ ಕರ್ನಾಟಕ ರಾಜ್ಯಮಟ್ಟ)







ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು
ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ಕ್ರ.ಸಂ. 03

ನಮ್ಮ ಹೆಮ್ಮೆಯ ರೈತ

ಹೆಸರು : **ಚಂದ್ರಶೇಖರ ತಂ. ನಂಜಪ್ಪ**



ವಿಳಾಸ : ಗ್ರಾಮ ಹುಗನಹಳ್ಳಿ ಹೋ॥ ಯಾಪಲದಿನ್ನಿ ತಾ॥ & ಜಿ॥ ರಾಯಚೂರು

ಮೊಬೈಲ್ ಸಂಖ್ಯೆ : 9482719863

ಒಟ್ಟು ಭೂಮಿ : 4.0 ಎಕರೆ

ಶೈಕ್ಷಣಿಕ ವಿದ್ಯಾರ್ಹತೆ : ಪಿ.ಯು.ಸಿ

ವಿಶೇಷತೆ : ಹೆಸರು, ಸಾವಯವ ಭತ್ತ, ಮಾವು, ಲಿಂಬು, ಮಲ್ಲಿಗೆಹೂ, ತೆಂಗು, ಕರಿಬೆವು, ಪೇರಲ್, ಅಂಜೂರ, ಕಿತ್ತಾಳೆ 3 ಆಕಳು, 50 ಕೋಳಿ ಮತ್ತು 3 ಜೇನು ಪೆಟ್ಟಿಗೆ ಮುಂತಾದವುಗಳು

ವಿಶೇಷತೆಗಳು : ಇವರು ತಮ್ಮ 4.0 ಎಕರೆ ಜಮೀನಿನಲ್ಲಿ ಸಮಗ್ರ ಕೃಷಿ ಅಳವಡಿಕೆ ಮಾಡಿದ್ದಾರೆ.
ತಮ್ಮ 4.0 ಎಕರೆ ಜಮೀನಿನಲ್ಲಿ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಂಡಿರುತ್ತಾರೆ.
ಇವರ ಜಮೀನನಲ್ಲಿ ಮಲ್ಲಿಗೆ ಹೂ, ನಿಂಬೆ ಮತ್ತು ಹಣ್ಣಿನ ಬೆಳೆಗಳನ್ನು ಸ್ಥಳೀಯವಾಗಿ ತೋಟದಲ್ಲಿ ಮಾರಾಟ ಮಾಡುತ್ತಿದ್ದಾರೆ.
ಸಾವಯವ ಭತ್ತ ಮತ್ತು ತರಕಾರಿ ಬೆಳೆಗಳನ್ನು ಸಾವಯವ ಪದ್ಧತಿಯಲ್ಲಿ ಬೆಳೆದು ಸ್ಥಳೀಯ ಮಾರುಕಟ್ಟಗೆ ಮಾರಾಟ ಮಾಡುತ್ತಿದ್ದಾರೆ.
ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಸಿರಿಧಾನ್ಯಗಳು ಮತ್ತು ದ್ವಿದಳ ಧಾನ್ಯಗಳು ಬೆಳೆಗಳನ್ನು ಸಹ ಬೆಳೆಯುತ್ತಿದ್ದಾರೆ.
ಕೃಷಿ ವಿಜ್ಞಾನ ಕೇಂದ್ರ, ರಾಯಚೂರಿನ ಸತತ ಮಾರ್ಗದರ್ಶನದಲಿ ಜೀವಾಮೃತ, ಎರೆಜಲ, ಎರೆಹುಳು ಗೊಬ್ಬರ,
ಬಯೋಡೈಜೆಸ್ಟ್ ಗೊಬ್ಬರಗಳನ್ನು ತಯಾರಿಸಿ ಜಮೀನಿಗೆ ಬಳಸುವುದರೊಂದಿಗೆ
ಸಾವಯವ ಕೃಷಿಯ ಬಗ್ಗೆ ಹೆಚ್ಚು ಗಮನ ಹರಿಸಿ, ಮಾರಾಟವು ಸಹ ಮಾಡುತ್ತಿದಾರೆ.
ಜಮೀನಲ್ಲಿ ಕಸಕಡ್ಡಿಗಳನ್ನು ಬಳಸಿ ಎರೆಹುಳ ಗೊಬ್ಬರವನ್ನು ತಯಾರಿಸಿ ಜಮೀನಿಗೆ
ಬಳಸುವುದರೊಂದಿಗೆ ಸಾವಯವ ಕೃಷಿಯ ಬಗ್ಗೆ ಹೆಚ್ಚು ಗಮನ ಹರಿಸುತ್ತಿದ್ದಾರೆ.
ಇವರ ಜಮೀನಿನಲ್ಲಿ ಪ್ರತಿ ದಿನ 3 ರಿಂದ 4 ಜನ ಕೃಷಿ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ.
ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಖಾತೆ ಪುಸ್ತಕವನ್ನು ಹೊಂದಿರುತ್ತಾರೆ.
ಕೃಷಿಯಿಂದ ಉತ್ತಮ ಆರ್ಥಿಕತೆಯನ್ನು ಹೊಂದಿ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ.

ವಾರ್ಷಿಕ ಆದಾಯ : ರೂ. 7,50,000/–

ಇತರೆ ಚಟುವಟಿಕೆಗಳು : ಕೃಷಿ ಮತ್ತು ಉಪಕಸಬು ಕೃಷಿ ಪ್ರವಾಸ, ಕೃಷಿ ಚಿಂತನ ಕೂಟ, ಸಾಮಾಜಿಕ ಸ್ವಾಸ್ಥಕ್ಕಾಗಿ ಸೇವೆ

ಪ್ರಶಸ್ತಿಗಳು :
1. ಶ್ರೇಷ್ಠ ಕೃಷಿಕ ಪ್ರಶಸ್ತಿ
2. ಶ್ರೇಷ್ಠ ಸಾವಯವ ಕೃಷಿ ಪ್ರಶಸ್ತಿ
3. ಡಾ. ಅಬ್ದುಲ್ ಕಲಾಂ ಸಮಾಜ ಸೇವೆ ವತಿಯಿಂದ ಉತ್ತಮ ರೈತ ಪ್ರಶಸ್ತಿ









ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು
ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ಕ್ರ.ಸಂ. 04

ನಮ್ಮ ಹೆಮ್ಮೆಯ ರೈತ



ಹೆಸರು : **ಶ್ರೀ. ಗಂಗಪ್ಪ ತಂದೆ ರಾಮಣ್ಣ**

ವಿಳಾಸ : ಗ್ರಾಮ ಅಮೀನಗಡ ತಾ॥ ಮಸ್ಕಿ ಜಿ॥ ರಾಯಚೂರು

ಮೊಬೈಲ್ ಸಂಖ್ಯೆ : 9741457122

ಒಟ್ಟು ಭೂಮಿ : 2.26 ಎಕರೆ

ಶೈಕ್ಷಣಿಕ ವಿದ್ಯಾರ್ಹತೆ : 5 ನೇ ತರಗತಿ

ವಿಶೇಷತೆ : ಕಬ್ಬು, ನಿಂಬೆ, ಸಿಬೆ, ಸೀತಾಫಲ, ಬಾಳೆ, ನುಗ್ಗೆ, ಚೆಂಡು ಹೂ, ತರಕಾರಿ ಬೆಳೆಗಳು, ಶ್ರೀಗಂಧ, ಹೆಬ್ಬೆವು, ಮಹಾಗನಿ, ತೆಂಗು ಆಕಳು–2, ಕೋಳಿ–20 ಜೇನು ಪೆಟ್ಟಿಗೆ–2 ಮತ್ತು ಮೀನು ಸಾಕಾಣಿಕೆ ಇತರೆ

ವಿಶೇಷತೆಗಳು : ಇವರು ತಮ್ಮ 2.26 ಎಕರೆ ಜಮೀನಿನಲ್ಲಿ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಕೆ ಮಾಡಿಕೊಂಡಿರುತ್ತಾರೆ.
ಇವರ ಜಮೀನಿನಲ್ಲಿ ಕಾಕಡ ಮಲ್ಲಿಗೆ, ಚೆಂಡು ಹೂ, ಸಿಬೆ, ಸೀತಾಫಲ ಮತ್ತು ಬಾಳೆ ಬೆಳೆಗಳನ್ನು ಸಳೀಯವಾಗಿ ತೋಟದಲಿ ಮಾರಾಟ ಮಾಡುತಿದಾರೆ.
ತಮ್ಮ 2.00 ಎಕರೆ ಜಮೀನಿನಲ್ಲಿ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಂಡಿರುತ್ತಾರೆ.
10 ಗುಂಟೆಯಲ್ಲಿ ಕಬ್ಬಿನ ಬೆಳೆಯನ್ನು ಸಾವಯವ ಪದ್ಧತಿಯಲ್ಲಿ ಬೆಳೆಯುತ್ತಿದ್ದಾರೆ
ಜಮೀನಿನ ಬದುವಿನಲ್ಲಿ ಶ್ರೀಗಂಧ, ಹೆಬ್ಬೆವು, ಮಹಾಗನಿ, ತೆಂಗು ಮತ್ತು ನುಗ್ಗೆ ಬೆಳೆಗಳನ್ನು ಬೆಳೆಯತ್ತಿದ್ದಾರೆ.
ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ತರಕಾರಿ ಮತ್ತು ಹಣ್ಣಿನ ಬೆಳೆಗಳನ್ನು ಸಹ ಬೆಳೆಯುತ್ತಿದ್ದಾರೆ.
ಸಣ್ಣ ಉದ್ಯಮದಾರರ "ಶ್ರೀ. ಹುಚ್ಚಬುಡೇಶ್ವರ ಫಾರ್ಮ್" ಶೀರ್ಷಿಕೆಯಡಿಯಲ್ಲಿ ವಾಣಿಜ್ಯ ಇಲಾಖೆಯಿಂದ ನೊಂದಾಯಿಸಿ ಕೊಂಡಿರುತ್ತಾರೆ.
ತೋಟಗಾರಿಕೆ ಇಲಾಖೆ, ರಾಯಚೂರು ಇವರಿಂದ ಬೆಲ್ಲ ಉತ್ಪಾದಿಸುವ ಪ್ಯಾಕ್ ಹೌಸ್‌ನ್ನು ಪಡೆದುಕೊಂಡು ಸಾವಯವ ಬೆಲ್ಲವನ್ನು ಉತ್ಪಾದಿಸಿ ಸ್ಥಳಿಯ ಮತ್ತು ಬೇರೆ ಜಿಲ್ಲೆಗಳಿಗೆ ಮಾರಾಟವನ್ನು ಮಾಡುತ್ತಿದ್ದಾರೆ.
ಕೃಷಿ ವಿಜ್ಞಾನ ಕೇಂದ್ರ, ರಾಯಚೂರಿನ ಸತತ ಮಾರ್ಗದರ್ಶನದಲಿ ಜೀವಾಮೃತ, ಎರೆಜಲ, ಎರೆಹುಳು ಗೊಬ್ಬರಗಳನ್ನು ತಯಾರಿಸಿ ಜಮೀನಿಗೆ ಬಳಸುವುದರೊಂದಿಗೆ ಸಾವಯವ ಕೃಷಿಯ ಬಗ್ಗೆ ಹೆಚ್ಚು ಗಮನ ಹರಿಸಿ,
ಮಾರಾಟವು ಸಹ ಮಾಡುತ್ತಿದಾರೆ.

ವಾರ್ಷಿಕ ಆದಾಯ : ರೂ. 4,50,000/–

ಇತರೆ ಚಟುವಟಿಕೆಗಳು : ಕೃಷಿ ಪ್ರವಾಸ, ಕೃಷಿ ಚಿಂತನ ಕೂಟ, ಸಾಮಾಜಿಕ ಸ್ವಾಸ್ಥಕ್ಕಾಗಿ ಸೇವೆ ಸಣ್ಣ ಉದ್ಯಮದಾರರ ಸಾವಯವ ಬೆಲ್ಲವನ್ನು ಉತ್ಪಾದಿಸಿ ಮಾರಾಟ ಮಾಡುತ್ತಿದ್ದಾರೆ

ಪ್ರಶಸ್ತಿಗಳು : 1. ಸಾವಯವ ಸಾಧಕ ರೈತ ಪ್ರಶಸ್ತಿ

2. ಉತ್ತಮ ಸಾಧಕ ರೈತ ಪ್ರಶಸ್ತಿ ಇರಕಲ್ ಮಠ







ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ನಮ್ಮ ಹೆಮ್ಮೆಯ ರೈತ

ಕ್ರ.ಸಂ. 05



ಹೆಸರು : **ಶ್ರೀ. ಮಲ್ಲಿಕಾರ್ಜುನ ತಂ. ಶೇಖರಪ್ಪ**

ವಿಳಾಸ : ಸಾ॥ ಕಲಮಂಗಿ ಹೊ॥ ತುರ್ವಿಹಾಳ ತಾ॥ ಸಿಂಧನೂರು ಜಿ॥ ರಾಯಚೂರು

ಮೊಬೈಲ್ ಸಂಖ್ಯೆ : 8746046467

ಒಟ್ಟು ಭೂಮಿ : 31 ಎಕರೆ

ಶೈಕ್ಷಣಿಕ ವಿದ್ಯಾರ್ಹತೆ : ಪಿ.ಯು.ಸಿ.

ವಿಶೇಷತೆ : ಕಬ್ಬು, ಡ್ರ್ಯಾಗನ್ ಹಣ್ಣು, ಬಾಳೆ, ತೆಂಗು, ಈರುಳ್ಳಿ, ತರಕಾರಿ ಬೆಳೆಗಳು, ನವಣೆ, ಕಡಲೆ, ತೊಗರಿ, ಸಜ್ಜೆ, ಸೂರ್ಯಕಾಂತಿ ಸ್ವದೇಶಿ ಆಕಳು–5, ಎಮ್ಮೆ–5, ಕುರಿಗಳು–2, ಮೇಕೆ–2, ಕೋಳಿ–48 ಹಾಗೂ ಮೀನು–5000 ಇತರೆ (ಶ್ರೀಗಂಧ, ಮಹಾಗನಿ, ಹೆಬ್ಬೇವು ಹಾಗೂ ವಿವಿಧ ಮೇವಿನ ಬೆಳೆಗಳು)

ವಿಶೇಷತೆಗಳು :

ಇವರು ತಮ್ಮ 20 ಎಕರೆ ಜಮೀನಿನಲ್ಲಿ ಸಮಗ್ರ ಕೃಷಿ ಅಳವಡಿಕೆ ಮಾಡಿದ್ದಾರೆ.

ಶ್ರೀಗಂಧ ನರ್ಸರಿ ಸಸಿಗಳನ್ನು ತಮ್ಮ ತೋಟದಲ್ಲಿ ಬೆಳೆಸಿ ಸ್ಥಳೀಯ ಹಾಗೂ ಹೊರ ರಾಜ್ಯಗಳ ರೈತರಿಗೆ ಮಾರಾಟ ಮಾಡುತ್ತಿದ್ದಾರೆ.

ಡ್ರ್ಯಾಗನ್ ಹಣ್ಣುಗಳು ಬೆಳೆದು ಸ್ಥಳೀಯ ರೈತರಿಗೆ ಪರಿಚಯಿಸಿ ಹಾಗೂ ಉತ್ಪಾದಿಸಿದ ಬೆಳೆಯನ್ನು ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ಹಾಗೂ ಮಹಾರಾಷ್ಟ್ರ ರಾಜ್ಯಗಳಿಗೆ ಮಾರಾಟ ಮಾಡುತ್ತಿದ್ದಾರೆ.

ಕಬ್ಬು ಬೆಳೆಯನ್ನು ಎನ್.ಎಲ್.ಎಸ್. ಶುಗರ್ ಕಂಪನಿಯೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡಿರುವರು.

ಕಬ್ಬು ಬೆಳೆಗೆ ಹನಿ ನೀರಾವರಿ ಅಳವಡಿಕೆ ಮಾಡಿ ಕಡಿಮೆ ನೀರು ಬಳಸಿ ಹೆಚ್ಚಿನ ಇಳುವರಿ ಪಡೆಯುತ್ತಿದ್ದಾರೆ.

ತಮ್ಮ ಜಮೀನಿನ ಬೋರ್ವೆಲ್ ನೀರನ್ನು ಹೊರ ತೆಗೆಯಲು ಸೋಲಾರ ಪೆನಲ್ ಬಳಕೆ ಹಾಗೂ ಸೋಲಾರ ಫೆನ್ಸಿಂಗ್ ಬಳಸಿಕೊಂಡು ತಮ್ಮ ಜಮೀನನ್ನು ರಕ್ಷಣೆ ಮಾಡಿಕೊಂಡಿರುತ್ತಾರೆ.

ಸೋಲಾರ ಕೋಳಿ ಶೆಡ್ ನಿರ್ಮಿಸಿ ನಾಟಿ ಕೋಳಿಗಳನ್ನು ಸಾಕಾಣಿಕೆ ಮಾಡುತಿದ್ದಾರೆ.

ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಸಿರಿಧಾನ್ಯಗಳು, ದ್ವಿದಳ ಧಾನ್ಯಗಳು, ಎಣ್ಣೆಕಾಳು ಬೆಳೆಗಳನ್ನು ಸಹ ಬೆಳೆಯುತ್ತಿದ್ದಾರೆ.

ತೊಗರಿ ಬೆಳೆಯಲ್ಲಿ ಕುಡಿ ಚಿವುಟುವಿಕೆ ಹಾಗೂ ಹನಿ ನೀರವಾರಿ ಪದ್ಧತಿಯ ತಂತ್ರಜ್ಞಾನಗಳನ್ನು ಆಳವಡಿಸಿಕೊಂಡು ಹೆಚ್ಚಿನ ಇಳುವರಿಯನ್ನು ಪಡೆಯುತ್ತಿದ್ದಾರೆ.

ಕಬ್ಬು ಇತರ ಬೆಳೆ ಹುಳಿಕೆಗಳನ್ನು ಸುಡದೆ ಭೂಮಿಗೆ ಹೊದಿಕೆ ಮಾಡಿ (ಮಲ್ಚಿಂಗ್) ಭೂಮಿಯ ಫಲವತ್ತತೆಯನ್ನು ಕಾಪಾಡಿಕೊಂಡು ಬಂದಿರುತ್ತಾರೆ.

ಜಮೀನಲ್ಲಿ ಕಸಕಡ್ಡಿಗಳನ್ನು ಬಳಸಿ ಎರೆಹುಳ ಗೊಬ್ಬರವನ್ನು ತಯಾರಿಸಿ ಜಮೀನಿಗೆ ಬಳಸುವುದರೊಂದಿಗೆ ಸಾವಯವ ಕೃಷಿಯ ಬಗ್ಗೆ ಹೆಚ್ಚು ಗಮನ ಹರಿಸಿ, ಮಾರಾಟವು ಸಹ ಮಾಡುತ್ತಿದ್ದಾರೆ.

ಇವರ ಜಮೀನಿನಲ್ಲಿ ಪ್ರತಿ ದಿನ 5 ರಿಂದ 6 ಜನ ಕೃಷಿ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ.

ವಾರ್ಷಿಕ ಆದಾಯ : 28.45 ಲಕ್ಷ

ಇತರೆ ಚಟುವಟಿಕೆಗಳು : ಕೃಷಿ ಪ್ರವಾಸ, ಕೃಷಿ ಚಿಂತನ ಕೂಟ, ಸಾಮಾಜಿಕ ಸ್ವಾಸ್ಥಕ್ಕಾಗಿ ಸೇವೆ ಹಾಗೂ ಕೃಷಿ ಮತ್ತು ಇತರೆ ಉಪಕಸಬುಗಳು

ಪ್ರಶಸ್ತಿಗಳು :

1. ಅತ್ಯುತ್ತಮ ಕಬ್ಬು ಎನ್.ಎಲ್.ಎಸ್. ಶುಗರ್ ಕಂಪನಿ
2. ಅತ್ಯುತ್ತಮ ಜಿಲ್ಲೆಯ ರೈತ (ರೈತ ಸಂಪರ್ಕ ಕೇಂದ್ರ)
3. ಉದಯೋನ್ಮುಖ ರೈತ ರಾಜ್ಯ ಸರ್ಕಾರ (ರಾಜ್ಯಮಟ್ಟ)
4. ಡಿಸ್ಟ್ರಿಕ್ಟ್ ಬಿಲಿಯನೇರ್ ಫಾರ್ಮರ್ ಆಫ್ ಇಂಡಿಯಾ ಅವಾರ್ಡ್–2023 ಐಎಆರ್‌ಐ–ಪುಸ, ನವದೆಹಲಿ
5. ಸೂಪರ್ ಸ್ಟಾರ್ ರೈತ, ವಿಜಯ ಕರ್ನಾಟಕ







ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು
ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ಕ್ರ.ಸಂ. 06

ನಮ್ಮ ಹೆಮ್ಮೆಯ ರೈತ



ಹೆಸರು	:	ಶ್ರೀ. ಶಿವರಾಜ ನಾಯಕ
ವಿಳಾಸ	:	ಗ್ರಾಮ: ಗೌಡನಭಾವಿ ಹೋ: ಬಳಗನೂರು ತಾ: ಮಸ್ಕಿ ಜಿ: ರಾಯಚೂರು
ಮೊಬೈಲ್ ಸಂಖ್ಯೆ	:	9888218999
ಒಟ್ಟು ಭೂಮಿ	:	51 ಎಕರೆ
ಶೈಕ್ಷಣಿಕ ವಿದ್ಯಾರ್ಹತೆ	:	ಎಂ.ಬಿ.ಎ.
ವಿಶೇಷತೆ	:	10 ಎಕರೆ ತೊಗರಿ, ಭತ್ತ, ದಾಳಿಂಬೆ, 5 ಎಕರೆ ನಿಂಬೆ, ನೆರಳೆ, ತೆಂಗು, ಪೇರಲ, ಸಪೋಟ, ಮೆಣಸಿನಕಾಯಿ, ಹೆಬ್ಬೆವು, ಮಹಾಗನಿ, ರಕ್ತಚಂದನ 10,000 ಮೀನು, 17 ಕುರಿ & 100 ಕೋಳಿ
ವಿಶೇಷತೆಗಳು	:	ದಾಳಿಂಬೆ ಬೆಳೆಯನ್ನು ಅಧಿಕ ಸಾಂದ್ರತೆಯ ಪದ್ಧತಿ ಉಪಯೋಗಿಸಿಕೊಂಡು ಬೆಳೆದಿರುತ್ತಾರೆ (ಉದಾ: ಸಾಲಿನಿಂದ ಸಾಲಿಗೆ 12 ಗಿಡದಿಂದ ಗಿಡಕ್ಕೆ 10 ಅಡಿ ಅಂತರ) ಉತ್ಪಾದಿಸಿದ ಬೆಳೆಯನ್ನು ಮಹಾರಾಷ್ಟ್ರ ಹಾಗೂ ಹೈದರಾಬಾದ್ ರಾಜ್ಯಗಳಿಗೆ ಮಾರಾಟ ಮಾಡುತ್ತಿದ್ದಾರೆ. ಭತ್ತದಲ್ಲಿ ನೇರ ಕೂರಿಗೆ ಬಿತ್ತನೆ ಹಾಗೂ ಯಂತ್ರ ನಾಟಿ ಪದ್ಧತಿಯ ತಂತ್ರಜ್ಞಾನವನ್ನು ಕೈಗೊಂಡಿರುತ್ತಾರೆ. ಕೃಷಿ ವಿಜ್ಞಾನ ಕೇಂದ್ರ, ರಾಯಚೂರಿನ ಸತತ ಮಾರ್ಗದರ್ಶನದಲ್ಲಿ ಇವರ 8 ಎಕರೆ ಜಮೀನಿನಲ್ಲಿ ವೈಜ್ಞಾನಿಕ ಸಮಗ್ರ ಕೃಷಿಯನ್ನು ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ (ಜೋಳ, ನಿಂಬೆ, ನೆರಳೆ, ತೆಂಗು, ಪೇರಲ, ಸಪೋಟ, ಮೆಣಸಿನಕಾಯಿ, ಹೆಬ್ಬೆವು, ಮಹಾಗನಿ, ರಕ್ತಚಂದನ, ಕೃಷಿ ಹೊಂಡ) ಇವರು ನಿಂಬೆ ಮತ್ತು ಸಪೋಟ ಹಣ್ಣುಗಳನ್ನು ಸ್ಥಳೀಯವಾಗಿ ತೋಟದಲ್ಲಿ ಮಾರಾಟ ಮಾಡುತ್ತಿದ್ದಾರೆ. ತಮ್ಮ ಜಮೀನಿನಲ್ಲಿ ತೊಗರಿ ಬೆಳೆಯಲ್ಲಿ ಕುಡಿ ಚಿವುಟುವಿಕೆ ಹಾಗೂ ಹನಿ ನೀರವಾರಿ ಪದ್ಧತಿಯ ತಂತ್ರಜ್ಞಾನಗಳನ್ನು ಆಳವಡಿಸಿಕೊಂಡು ಹೆಚ್ಚಿನ ಇಳುವರಿಯನ್ನು ಪಡೆಯುತ್ತಿದ್ದಾರೆ. ಇವರು ಜಮೀನಲ್ಲಿ ಕಸಕಡ್ಡಿಗಳನ್ನು ಬಳಸಿ ಎರೆಹುಳ ಗೊಬ್ಬರವನ್ನು ತಯಾರಿಸಿ ಜಮೀನಿಗೆ ಬಳಸುವುದರೊಂದಿಗೆ ಸಾವಯವ ಕೃಷಿಯ ಬಗ್ಗೆ ಹೆಚ್ಚು ಗಮನ ಹರಿಸಿ, ಮಾರಾಟವು ಸಹ ಮಾಡುತ್ತಿದಾರೆ. ತರಕಾರಿ ಬೆಳೆಗಳನ್ನು ಸಾವಯವ ಪದ್ಧತಿಯಲ್ಲಿ ಬೆಳೆದು ಸ್ಥಳೀಯ ಮಾರುಕಟ್ಟಗೆ ಮಾರಾಟ ಮಾಡುತ್ತಿದ್ದಾರೆ. ಹಿಂಗಾರಿನಲ್ಲಿ ಜೋಳದ ಬೆಳೆಗೆ ಅಧಿಕ ಉತ್ಪಾದಕತೆಗಾಗಿ ಸುಧಾರಿತ ತಂತ್ರಜ್ಞಾನಗಳನ್ನು ಉಪಯೋಗಿಸಿಕೊಂಡು ಹೆಚ್ಚಿನ ಇಳುವರಿ ಪಡೆಯುತ್ತಿದ್ದಾರೆ. 10,000 ಮೀನು, 17 ಕುರಿ & 100 ಕೋಳಿ ಸಾಕಾಣಿಕೆ ಮಾಡುತ್ತಿದ್ದಾರೆ. ಕೃಷಿಯಿಂದ ಉತ್ತಮ ಆರ್ಥಿಕತೆಯನ್ನು ಹೊಂದಿ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ.
ವಾರ್ಷಿಕ ಆದಾಯ	:	47.80 ಲಕ್ಷ ರೂ.
ಇತರೆ ಚಟುವಟಿಕೆಗಳು	:	ಕೃಷಿ ಪ್ರವಾಸ, ಕೃಷಿ ಚಿಂತನ ಕೂಟ, ಸಾಮಾಜಿಕ ಸ್ವಾಸ್ಥಕ್ಕಾಗಿ ಸೇವೆ ಹಾಗೂ ಕೃಷಿ ಮತ್ತು ಇತರೆ ಉಪಕಸಬುಗಳು
ಪ್ರಶಸ್ತಿಗಳು	:	1. ಸೂಪರ್ ಸ್ಟಾರ್ (ರೈತ ವಿಜಯ ಕರ್ನಾಟಕ ರಾಜ್ಯಮಟ್ಟ) 2. ಪ್ರಗತಿಪರ ರೈತ (ಪ್ರತಾಪ್ ಗೌಡ ಪೌಂಡೇಷನ್, ಸ್ಥಳಿಯ)







ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು
ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ಕ್ರ.ಸಂ. 07

ನಮ್ಮ ಹೆಮ್ಮೆಯ ರೈತ



ಹೆಸರು : **ಶ್ರೀ. ಸುರೇಶ ಗೌಡ**

ವಿಳಾಸ : ಹೆಚ್. ತಿಮ್ಮಾಪುರ, ರಾಯಚೂರು (ತಾ) & (ಜಿ)

ಮೊಬೈಲ್ ಸಂಖ್ಯೆ :

ಒಟ್ಟು ಭೂಮಿ : 40 ಎಕರೆ

ಶೈಕ್ಷಣಿಕ ವಿದ್ಯಾರ್ಹತೆ : 10 ನೇ ತರಗತಿ

ವಿಶೇಷತೆ : 10 ಎಕರೆ ಪೇರಲ, ನೇರಳೆ, 5 ಎಕರೆ ಬ್ಯಾಡಗಿ ಮೆಣಸಿನಕಾಯಿ, 4 ಎಕರೆ ತೊಗರಿ ಬೀಜೋತ್ಪಾದನೆ, 4 ಎಕರೆ ಜೋಳ, 6 ಎಕರೆ ಹತ್ತಿ, 5 ಎಕರೆ ಮೇವಿನ ಬೆಳೆ ಹಾಗೂ ಕೃಷಿ ಹೊಂಡ 13 ಆಕಳು, 200 ಆಡು, 100 ಕೋಳಿ

ವಿಶೇಷತೆಗಳು :

ಪ್ರತಿ ವರ್ಷ ಟಿ.ಎಸ್.–3ಆರ್. ತೊಗರಿಯಲ್ಲಿ ಬೀಜೋತ್ಪಾದನೆ ಮಾಡುತ್ತಿದ್ದಾರೆ.

ಕೃಷಿ ವಿಜ್ಞಾನ ಕೇಂದ್ರ, ರಾಯಚೂರಿನಲ್ಲಿ ಸತತ ಮಾರ್ಗದರ್ಶನದಲ್ಲಿ ಆಡು ಮತ್ತು ಆಕಳುಗಳಿಗೆ ಹಲವಾರು ಮೇವಿನ ಬೆಳೆಗಳು ಬೆಳೆಯುತ್ತಾರೆ. ಸಿ.ಜ.ಎಫ್.ಎಸ್–31 ಹೆಡ್ಸ್ ಲುಸರ್ನ್, ಮೇವಿನ ಮರಗಳು, ನುಗ್ಗೆ ಹಲಸಂದಿ ಬೆಳೆಯುತ್ತಾರೆ

ಇವರು ಸುಮಾರು 6 ಕಿ.ಮೀ. ದೂರದ ನದಿಯಿಂದ ಪೈಪಲೈನ್ ಮುಖಾಂತರ ಕೃಷಿ ಹೊಂಡ ಮಾಡಿ ನೀರಿನ ಸೌಲಭ್ಯ ಮಾಡಿಕೊಂಡಿರುತ್ತಾರೆ.

ಇವರು ಹೆಚ್ಚು ಸಾವಯವ ಕೃಷಿಗೆ ಗಮನ ಕೊಟ್ಟು ಜೀವಾಮೃತ, ಜೈವಿಕ ಗೊಬ್ಬರ ಹಾಗೂ ಎರೆಹುಳು ಗೊಬ್ಬರದ ಬಳಕೆ ಮಾಡಿ ಕೃಷಿಯಲ್ಲಿ ಸಾವಯವ ಕೃಷಿಯನ್ನು ಮಾಡುತ್ತಾರೆ.

3 ವರ್ಷಗಳಿಂದ ಜೇನು ಸಾಕಾಣಿಕೆ ಮಾಡಿ, ವಾರ್ಷಿಕವಾಗಿ 8 ಕೆ.ಜಿ. ಜೇನುತುಪ್ಪ ಪಡೆಯುತ್ತಿದ್ದಾರೆ.

ಪೇರಲ ಹಣ್ಣಿನ ಗಿಡಗಳಲ್ಲಿ ಪ್ರೋನಿಂಗ್ ಮತ್ತು ಚಿಗುರು ಚಿವುಟುವುವ ತಂತ್ರಜ್ಞಾನವನ್ನು ಕೈಗೊಂಡಿರುತ್ತಾರೆ.

ಪೇರಲ ಬೆಳೆಯಲ್ಲಿ ಅಧಿಕ ಸಾಂದ್ರತೆಯ ಬೆಳೆಯನ್ನು ಬೆಳೆದಿರುತ್ತಾರೆ (ಉದಾ: ಸಾಲಿನಿಂದ ಸಾಲಿಗೆ 12 ಅಡಿ ಗಿಡದಿಂದ ಗಿಡಕ್ಕೆ 8 ಅಡಿ ಅಂತರ)

ಹೈನುಗಾರಿಕೆಯಲ್ಲಿ 3 ಗಿರ್ ಆಕಳುಗಳ ಸಾಕಾಣಿಕೆ ಮಾಡುತ್ತಿದ್ದಾರೆ.

ಇವರು ತಮ್ಮ ಕೃಷಿ ಭೂಮಿಯ ಸುತ್ತಲೂ ಸೋಲಾರ್ ಬೇಲಿಯನ್ನು ಹಾಕಿಸಿರುತ್ತಾರೆ.

ಒಟ್ಟಾರೆಯಾಗಿ ಕೃಷಿಯಿಂದ ಉತ್ತಮ ಆರ್ಥಿಕತೆಯನ್ನು ಹೊಂದಿ, ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ.

ವಾರ್ಷಿಕ ಆದಾಯ : ಒಂದು ಕೋಟಿ ಒಂಬತ್ತು ಲಕ್ಷ ರೂ.

ಇತರೆ ಚಟುವಟಿಕೆಗಳು : ಕೃಷಿ ಪ್ರವಾಸ, ಕೃಷಿ ಚಿಂತನ ಕೂಟ, ಸಾಮಾಜಿಕ ಸ್ವಾಸ್ಥಕ್ಕಾಗಿ ಸೇವೆ ಹಾಗೂ ಕೃಷಿ ಮತ್ತು ಇತರೆ ಉಪಕಸಬುಗಳು

ಪ್ರಶಸ್ತಿಗಳು :

1. ಶ್ರೇಷ್ಠ ಕೃಷಿಕ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು
2. ಕುರಿ ಮತ್ತು ಆಡುಗಳ ಪ್ರದರ್ಶನದಲ್ಲಿ ಪ್ರಥಮ ಬಹುಮಾನ
3. ಕೃಷಿ ಸಂಪನ್ಮೂಲ ವ್ಯಕ್ತಿ, ಕೃಷಿ ಮೇಳ, ಕೃವಿವಿ, ರಾಯಚೂರು
4. ಸೂಪರ್ ಸ್ಟಾರ್ ವಿಜಯವಾಣಿ
5. ಡಿಸ್ಟ್ರಿಕ್ಟ್ ಮಿಲಿಯನೇರ್ ಫಾರ್ಮರ್ ಆಫ್ ಇಂಡಿಯಾ ಅವಾರ್ಡ್–2023 ಐಎಆರ್ಐ–ಪುಸ, ನವದೆಹಲಿ





